3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.205/2018**

ಪ್ರಾ.ಸಾ 4

ಚಾ.ಸಾ 4

| | |
|---|---|
| ಹೆಸರು | ಸತೀಶ್ |
| ತಂದೆಯ ಹೆಸರು | ರೇವಣ್ಣ |
| ವಯಸ್ಸು | 45 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಬಿಳಿಗೆರೆಪಾಳ್ಯ |

ಸಾಕ್ಷಿಯನ್ನು ದಿನಾಂಕ 04.03.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಚಾಸಾ.1 ರವರು ಗೊತ್ತಿಲ್ಲ. ಚಾಸಾ.5 ರವರು ಗೊತ್ತಿಲ್ಲ. ಈಗ ನನಗೆ ತೋರಿಸಿದ ನಿಪಿ.1 ರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 7 ವರ್ಷಗಳ ಹಿಂದೆ ಕಿಬ್ಬನಹಳ್ಳಿ ಪೋ.ಠಾಣೆಯಲ್ಲಿ ಮಾಡಿರುತ್ತೇನೆ. ಯಾವ ವಿಚಾರಕ್ಕಾಗಿ ಸಹಿ ಮಾಡಿರುತ್ತೇನೆಂದು ಗೊತ್ತಿಲ್ಲ. ನಿಪಿ.1 ರಲ್ಲಿ ಬರೆದುಕೊಂಡಿರುವ ವಿಚಾರಗಳು ಗೊತ್ತಿಲ್ಲ. ಚಾಸಾ.3 ರವರು ಗೊತ್ತಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರು ಮಾಡಿದ ಪಂಚನಾಮೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ.

ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದ:**

2) ದಿನಾಂಕ 27.02.2018 ರಂದು ಚಾಸಾ.1 ರವರ ಮನೆಯ ಮುಂದೆ ಗಲಾಟೆ ನಡೆದ ಸಂದರ್ಭದಲ್ಲಿ ಪೊಲೀಸರು ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ನಿಪಿ.1 ರಂತೆ ವಿವರವಾಗಿ ಪಂಚನಾಮೆಯನ್ನು ಮಾಡಿಕೊಂಡು ನನ್ನ ಮತ್ತು ಚಾಸಾ.3 ರವರ ಸಹಿಗಳನ್ನು ಸ್ಥಳದಲ್ಲಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲದಲ್ಲಿ ಚಾಸಾ.1 ರವರು ಒಂದು ಚಾಕುವನ್ನು ಹಾಜರುಪಡಿಸಿದ್ದು ಅದೇ ಚಾಕುವಿನಿಂದ 2 ನೇ ಆರೋಪಿ ಪುನೀತ ಹಲ್ಲೆ ಮಾಡಿದ್ದು ಎಂದು ಹೇಳಿದ್ದು ಅದನ್ನು ನಮ್ಮ ಸಮಕ್ಷಮ ಪೊಲೀಸರು ವಶಕ್ಕೆ ತೆಗೆದುಕೂಂಡಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನನಗೆ ನೋಟೀಸನ್ನು ಪೊಲೀಸರು ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಅದು ನೋಟೀಸಾಗಿದ್ದು ಅದನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: ಆರೋಪಿಗಳ ಪರ ವಕೀಲರಿಂದ : ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ